## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.

**ಸಿ.ಸಿ. ಸಂಖ್ಯೆ:59/2015**

| | |
|---|---|
| ಫ್ರಾಸಾ | 15 |
| ಚಾಸಾ | 15 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 08.01.2026.

| | | |
|---|---|---|
| ಸಾಕ್ಷಿಯ ಹೆಸರು | : | ಕೃಷ್ಣಪ್ಪ |
| ತಂದೆಯ/ಗಂಡನ ಹೆಸರು | : | ಚಿಕ್ಕ ಹನುಮಂತಪ್ಪ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಕೃಷಿ |
| ವಾಸಸ್ಥಳ | : | ಪೂಲವಾರಿಪಲ್ಲಿ ಗ್ರಾಮ |

**(ಆರೋಪಿಯು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ**

ಈ ಹಂತದಲ್ಲಿ ಸಾಕ್ಷಿಗೆ ದೃಢೀಕೃತ ಶವ ತನಿಖಾ ವರದಿಯ ಪ್ರತಿಯನ್ನು ತೋರಿಸಿದ್ದು , ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪ್ರತಿಯನ್ನು **ನಿಪಿ-10** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-10(ಎ)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ 24.11.2017 ರಂದು ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ನಟರಾಜುರವರು ಮರಣೋತ್ತರ ಪರೀಕ್ಷೆ ಸಂಬಂಧ ಮಾಡಿರುತ್ತೇನೆ. ಸದರಿ ನಟರಾಜ್ ರವರು ದಿನಾಂಕ 05.02.2014 ರಂದು ಅಪಘಾತಕ್ಕೆ ಒಳಗಾಗಿ, ಆತನ ತಲೆಗೆ ತೀರ್ವ ಸ್ವರೂಪದ ಗಾಯಗಳಾಗಿರುತ್ತವೆ . ನಂತರ ಆತನನ್ನು ಬಾಗೇಪಲ್ಲಿ ಸರ್ಕಾರಿ

ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ. ನಂತರ ಹೆಚ್ಚಿನ ಚಿಕಿತ್ಸಗಾಗಿ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಸದರಿಯವರು ಸುಮಾರು 3 ವರ್ಷಗಳ ಕಾಲ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಚಿಕಿತ್ಸೆ ಫಲಕಾರಿಯಾಗದೇ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ನಿಧನರಾಗಿರುತ್ತಾರೆ. ಎಂ.ಎಸ್. ರಾಮಯ್ಯ ಆಸ್ಪತ್ರೆಯಿಂದ ಮೃತ ದೇಹವನ್ನು ಬಾಗೇಪಲ್ಲಿ ಆಸ್ಪತ್ರೆಗೆ ನಾನೇ ತೆಗೆದುಕೊಂಡು ಬಂದು ಮರಣೋತ್ತರ ಪರೀಕ್ಷೆ ಮಾಡಿಸಿರುತ್ತೇನೆ. ಸದರಿ ಶವ ತನಿಖಾ ವರದಿಗೆ ಚಾಸಾ-16 ಮತ್ತು 17 ರವರು ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು : ಶ್ರೀ ಕೆ.ಎಸ್. ಆರ್. ವಕೀಲರಿಂದ, ಆರೋಪಿ ಪರವಾಗಿಃ**

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಅಪಘಾತ ಸ್ಥಳಕ್ಕೆ ಅಪಘಾತ ನಡೆದ ದಿನವೇ ಸಂಜೆ 8 ಗಂಟೆ 2 ನಿಮಿಷಕ್ಕೆ ಹೋಗಿದ್ದೆ. ಆ ದಿನ ನಾನು ಸ್ಥಳಕ್ಕೆ ಹೋದಾಗ, ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ. ನಾನು ಅಪಘಾತ ಸ್ಥಳಕ್ಕೆ ಹೋದಾಗ, ಅಲ್ಲಿ ಸುಮಾರು 20 ರಿಂದ 30 ಜನ ಸೇರಿದ್ದರು. ಅವರ ಹೆಸರುಗಳನ್ನು ಹೇಳಲು ಆಗುವುದಿಲ್ಲ. ಗಾಯಾಳು ನಟರಾಜ್ ರವರನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಸದರಿ ಆಟೋ ಯಾರಿಗೆ ಸೇರಿದ್ದು ಗೊತ್ತಿಲ್ಲ. ನಾವು ಮೂರು ಜನ ಆಟೋದಲ್ಲಿ ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದೆವು. ಬಾಗೇಪಲ್ಲಿ ಆಸ್ಪತ್ರೆಯಿಂದ ಗಾಯಾಳು ನಟರಾಜ್ ರವರನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಅಂಬುಲೆನ್ಸ್ ಮೂಲಕ ಕರೆದುಕೊಂಡು ಹೋಗಿದ್ದೆವು. ನಾನು, ಚಾಸಾ-17 ಮತ್ತು ಚಾಸಾ21 ರವರು ಅಂಬುಲೆನ್ಸ್‌ನಲ್ಲಿ ಹೋಗಿದ್ದೆವು. ಮೃತ ನನ್ನ ಸಂಬಂಧಿಕರಲ್ಲ. ಆದರೆ ಆತ ನನ್ನ ದೂರದ ಸಂಬಂಧಿ ಎಂದು ನುಡಿಯುತ್ತಾರೆ. ಬೆಂಗಳೂರಿನ ಆಸ್ಪತ್ರೆಯಲ್ಲಿ ಸುಮಾರು 6 ತಿಂಗಳುಗಳ ಕಾಲ ಕೋಮಾದಲ್ಲಿ ಇದ್ದರು ಎಂದು ನುಡಿಯುತ್ತಾರೆ. ನಾನು ಒಂದು ವಾರದ ಕಾಲ ನಾನು ಬೆಂಗಳೂರಿನ ಆಸ್ಪತ್ರೆಯಲ್ಲಿ ಇದ್ದೆ

ಎಂದು ನುಡಿಯುತ್ತಾರೆ. 6 ತಿಂಗಳ ನಂತರ ನಟರಾಜ್ ಆಸ್ಪತ್ರೆಯಿಂದ ಬಿಡುಗಡೆಗೊಂಡಿರುತ್ತಾರೆ. ಆ ನಂತರ ನಟರಾಜ್ ರವರನ್ನು ನಾನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದೆ ಎಂದು ನುಡಿಯುತ್ತಾರೆ.

ಸಮಯ 2 ಗಂಟೆ ಆಗಿದ್ದು, ಮಧ್ಯಾಹ್ನ 2.45 ಕ್ಕೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.